ಸಾಕ್ಷಿಗೆ ದಿನಾಂಕಃ **03.06.2024** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ಃ ಪ್ರತಿವಾದಿ 1(ಎ) ರಿಂದ (ಹೆಚ್) ಶ್ರೀ. ವಿ ಆರ್ ಎನ್ ವಕೀಲರಿಂದ ಃ**

1. 1 ನೇ ಪ್ರತಿವಾದಿಯ ಗಂಡ ಇಬ್ರಾಹಿಂ ಸಾಬ್, ಹಿಮಾಮ್ ಸಾಬ್ ಹಾಗೂ ಕುಲಸಂಬಿ ರವರ ಮಗ ಎಂದರೆ ಸರಿ. ನಾನು ದಾವೆ ಸಲ್ಲಿಸುವ ಕಾಲಕ್ಕೆ ಇಬ್ರಾಹಿಂ ಸಾಬ್ ರವರು ತೀರಿಕೊಂಡಿದ್ದರು ಎಂದರೆ ಸರಿ. ಇಬ್ರಾಹಿಂ ಸಾಬ್‌ರವರು ಮೊದಲೇ ತೀರಿದ್ದ ಕಾರಣ ಅವರ ಹೆಂಡತಿ ಹನಿಫಾಬಿ ರವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಎರಡು ಜನ ಗಂಡು ಮಕ್ಕಳು ಹಾಗೂ 6 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ 6 ಜನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ 2 ರಿಂದ 7 ನೇ ಪ್ರತಿವಾದಿಗಳಾಗಿ ಮಾಡಿರುತ್ತೇನೆ ಎಂದರೆ ಸರಿ. ಪ್ರತಿವಾದಿ 2 ರಿಂದ 7 ರವರ ಜೊತೆ ಶಾಮೀಲಾಗಿ ಪ್ರಸ್ತುತ ದಾವೆಯನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

2. ನಾನು ಪ್ರಸ್ತುತ ದಾವೆಯಲ್ಲಿ ನಿಪಿ-11 ದಾಖಲೆಯನ್ನು 2 ನೇ ಪ್ರತಿವಾದಿ ಜೊತೆ ಶಾಮೀಲಾಗಿ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಖಾತೆ ಇಬ್ರಾಹಿಂ ಸಾಬ್ ರವರ ಹೆಸರಿಗೆ ಇತ್ತು ಎಂದರೆ ಸಾಕ್ಷಿ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಖಾತೆ ಇಬ್ರಾಹಿಂ ಸಾಬ್ ರವರ ಹೆಸರಿನಲ್ಲಿ ಇದ್ದು, ಅವರು ಮೃತರಾದ ನಂತರ 1 ನೇ ಪ್ರತಿವಾದಿ ಹೆಸರಿಗೆ ವಿದ್ಯಾರಣ್ಯಾಪುರ ಗ್ರಾಮ ಪಂಚಾಯಿತಿಯಲ್ಲಿ 2012 ನೇ ಸಾಲಿನಲ್ಲಿ ಖಾತಾ ಬದಲಾವಣೆ ಆಗಿರುತ್ತದೆ ಎಂದರೆ ಸರಿ. 2012 ರಿಂದ ಈವರೆಗೆ 1 ನೇ ಪ್ರತಿವಾದಿ ಹೆಸರಿನಲ್ಲೆ ದಾವಾಸ್ವತ್ತಿನ ಖಾತೆ ಇದ್ದು, ಕಂದಾಯ ಅವರ ಹೆಸರಿನಲ್ಲೆ ಕಟ್ಟುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. 1 ನೇ ಪ್ರತಿವಾದಿ ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಶೇಖ್ ಅಹಮ್ಮದ್ ಮತ್ತು ಬಷಿರ್ ಅಹಮ್ಮದ್ ಎನ್ನುವ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಇಬ್ಬರು ಗಂಡು ಮಕ್ಕಳು ಸಹ ತೀರಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 1(ಎ) ಮತ್ತು (ಬಿ) ಶೇಖ್ ಅಹಮ್ಮದ್ ರವರ ಪತ್ನಿಯರು ಎಂದರೆ ಸರಿ. ಪ್ರತಿವಾದಿ

1(ಎ) ರವರಿಗೆ ಶಬಿನಾ ಎನ್ನುವ ಮಗಳು ಇರುತ್ತಾರೆ ಎಂದರೆ ಸರಿ. ಸದರಿ ಶಬಿನಾ ರವರನ್ನು ದಾವೆಯಲ್ಲಿ ಪಾರ್ಟಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 1(ಬಿ) ರವರಿಗೆ ಇಬ್ಬರು ಮಕ್ಕಳು ಇದ್ದು, ಅವರನ್ನು ಪ್ರತಿವಾದಿ 1(ಸಿ) ಮತ್ತು 1(ಡಿ) ಎಂದು ಪಾರ್ಟಿಗಳಾಗಿ ಮಾಡಿರುತ್ತೇನೆ ಎಂದರೆ ಸರಿ. ಬಷಿರ್ ಅಹಮ್ಮದ್ ರವರ ಹೆಂಡತಿ ಪ್ರತಿವಾದಿ 1(ಇ) ಎಂದರೆ ಸರಿ. ಪ್ರತಿವಾದಿ 1(ಎಫ್) ರಿಂದ 1(ಹೆಚ್) ಸದರಿ ಬಷಿರ್ ಅಹಮ್ಮದ್ ಮತ್ತು ಪ್ರತಿವಾದಿ 1(ಇ) ರವರ ಮಕ್ಕಳು ಎಂದರೆ ಸರಿ.

4. ದಾವಾ ಆಸ್ತಿಯಲ್ಲಿ ಪ್ರಸ್ತುತ ಪ್ರತಿವಾದಿ 1(ಇ) ಮತ್ತು 1(ಎಫ್) ವಾಸವಾಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕಂದಾಯವನ್ನು ಅವರೇ ಪಾವತಿಸುತ್ತಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿ ಗಂಡ ಅಂದರೆ ಇಬ್ರಾಹಿಂ ಸಾಬ್ ರವರ ಹೆಸರಿಗೆ ಬದಲಾವಣೆ ಮಾಡಿದ ಸಮಯದಲ್ಲಿ ನನ್ನ ತಂದೆ ಯಾವುದೇ ಆಕ್ಷೇಪಣೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಗೆ ತಿಳಿಸದೆ ಗ್ರಾಮ ಪಂಚಾಯಿತಿ ರವರೊಟ್ಟಿಗೆ ಸೇರಿ ಖಾತೆಯನ್ನು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಇಬ್ರಾಹಿಂ ಸಾಬ್ ರವರ ಹೆಸರಿಗೆ ದಾವಾ ಆಸ್ತಿಯ ಖಾತೆ ಬದಲಾವಣೆಯಾಗಿರುವ ವಿಚಾರ ನನ್ನ ತಂದೆಗೆ ತಿಳಿದಿದ್ದರೂ ಈಗ ಅವರಿಗೆ ತಿಳಿದಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ತಂದೆಗೆ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇಲ್ಲದ ಕಾರಣ ಅವರು ಸದರಿ ಖಾತೆ ಬದಲಾವಣೆ ಸಮಯದಲ್ಲಿ ಯಾವುದೇ ತಕರಾರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

5. ನಾನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕುಲಸಂಬಿ ರವರ ಹೆಸರಿನಲ್ಲಿ ನಿಪಿ-9 ರಂತೆ ಮರಣ ಶಾಸನವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಹಾಗೂ ನನ್ನ ತಂದೆಯಿಂದ ಜಿ ಪಿ ಎ ಪಡೆದು ಈ ಸುಳ್ಳು ದಾವೆ ತಂದಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಗಂಡ ಹಾಗೂ ಪ್ರತಿವಾದಿ 2 ರಿಂದ 7 ರವರ ಅಜ್ಜನಾದ ಹಿಮಾಮ್ ಸಾಹೇಬ್ ರವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಹಿಮಾಮ್ ಸಾಹೇಬ್ ನಿಧನದ ನಂತರ ಅವರ ಏಕೈಕ ಮಗನಾದ ಇಬ್ರಾಹಿಂ ಸಾಬ್ ರವರಿಗೆ ದಾವಾಆಸ್ತಿ ನ್ಯಾಯಯುತವಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಈ ವಿಚಾರ ವಾದಿ ಹಾಗೂ ಅವರ ತಮ್ಮ ಮಹಮ್ಮದ್ ಮಸ್ತಾನ್ ರವರಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

6. ದಾವಾ ಆಸ್ತಿಯನ್ನು ಇಬ್ರಾಹಿಂ ಸಾಹೇಬ್ ರವರು ಅನುಭವಿಸುವುದಕ್ಕಾಗಿ ಮಹಮ್ಮದ್ ಮಸ್ತಾನ್ ಆಗಲೀ ಅಥವಾ ಅವರ ಮಕ್ಕಳಾಗಲೀ ನ್ಯಾಯಾಲಯಕ್ಕೆ ಸದರಿ ಆಸ್ತಿಯಲ್ಲಿ ಭಾಗ ಕೇಳಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಕತೆ ಕಟ್ಟಿಕೊಂಡು ದಾವೆ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

7. ನಾನು ಪ್ರತಿವಾದಿಗಳಿಂದ 2015 ರಲ್ಲಿ ಭಾಗ ಕೇಳಿದ ಬಗ್ಗೆ ಹೇಳಿದ್ದು, ಭಾಗ ಕೇಳಿ ವಕೀಲರ ಮೂಲಕ ನೋಟೀಸು ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ, ಅದು ನನಗೆ ವಕಿಲರಿಗೆ ನೀಡಿರುತ್ತೇನೆ. ನಾನು ಆ ರೀತಿ ಯಾವುದೇ ನೋಟೀಸು ಕೊಡದಿದ್ದರೂ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

8. ನನ್ನ ತಂದೆಯ ತಂದೆ ಹೆಸರು ಕಿರು ಸಾಹೇಬ್ ಎಂದರೆ ಸರಿ. ದಾವಾಸ್ವತ್ತು ಕಿರು ಸಾಹೇಬ್ ರವರಿಗೆ ಸೇರಿರಲಿಲ್ಲ ಎಂದರೆ ಸಾಕ್ಷಿಯು ಸದರಿ ಆಸ್ತಿಯು ಅವರ ಹೆಂಡತಿ ಕುಲುಸಂಬಿ ರವರಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಕುಲುಸಂಬಿ ರವರ ಮೂಲಕ ಬಂದಿರುತ್ತದೆ. ನಿಪಿ-3 ರಲ್ಲಿ "ತಮ್ಮ ಪಂಚಾಯ್ತಿ ವ್ಯಾಪ್ತಿಯ ಕಿಣಿಕಿಣಿ ಹೆಮ್ಮನೆಯಲ್ಲಿರುವ ಅಸ್ಸೆಸ್ಮೆಂಟ್ ನಂಃ 520/507 ರ ಸ್ವತ್ತನ್ನು ನಮ್ಮ ತಂದೆಯವರ ಸ್ವತ್ತಾಗಿದ್ದು, ತಂದೆಯವರ ಮರಣಾನಂತರ ನಮ್ಮ ತಾಯಿಯವರ ಸ್ವಾಧೀನಾನುಭವದಲ್ಲಿರುತ್ತದೆ " ಎಂದು ಹೇಳಿ ನನ್ನ ತಂದೆ ಗ್ರಾಮ ಪಂಚಾಯ್ತಿಗೆ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದರಿ ಭಾಗವನ್ನು ನೋಡಿ ಓದಿ ಒಪ್ಪಿದ ಮೇರೆಗೆ ಸದರಿ ಭಾಗವನ್ನು ನಿಡಿ-2 ಎಂದು ಗುರುತಿಸಲಾಯಿತು. ಸದರಿ ಭಾಗ ಸರಿಯೋ ತಪ್ಪೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ಪತ್ರವನ್ನು ನನ್ನ ತಂದೆ ಬರೆದಿದ್ದು, ಬರೆಯುವಲ್ಲಿ ಹೆಚ್ಚು ಕಡಿಮೆ ಆಗಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಅದೇ ರೀತಿ ನಿಪಿ-3 ರಲ್ಲಿ " ವಿಲ್ ಅನ್ನು ದಿನಾಂಕಃ 07.04.1997 ರಂದು ಬರೆದು ದಿನಾಂಕಃ 18.06.1998 ರಂದು ಮರಣ ಹೊಂದಿರುತ್ತಾರೆ " ಎಂದು ಬರೆದಿರುವ ವಿಷಯ ಸಹ ಸುಳ್ಳು ಎಂದರೆ ಸರಿಯಲ್ಲ.

9. ನಾನು ಹಾಜರುಪಡಿಸಿರುವ ನಿಪಿ-1 ರಿಂದ 11 ದಾಖಲೆಗಳಲ್ಲಿ ನಿಪಿ-9 ನ್ನು ಹೊರತುಪಡಿಸಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಿಸ್ತೀರ್ಣ, ಚೆಕ್ಕುಬಂಧಿ , ಸರ್ವೆ ನಂಬರ್ ಎಲ್ಲೂ ಸಹ ಕಾಣುವುದಿಲ್ಲ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಪಿ-9

ನ್ನು ಸೃಷ್ಟಿ ಮಾಡಿಕೊಂಡು ದಾವಾ ಆಸ್ತಿಯನ್ನು ಕಬಳಿಸುವುದಕ್ಕಾಗಿ ಪ್ರಸ್ತುತ ದಾವೆಯನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

10. ನಾನು ಕುಲುಸಂಬಿ ರವರ ಮರಣಶಾಸನದಲ್ಲಿ ದಿನಾಂಕವನ್ನು ತಿದ್ದುಪಡಿ ಮಾಡಿ ಗ್ರಾಮ ಪಂಚಾಯ್ತಿಗೆ ಖಾತೆಯನ್ನು ಬದಲಾವಣೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯ್ತಿ ಜೊತೆ ಶಾಮೀಲಾಗಿ ಗ್ರಾಮಪಂಚಾಯ್ತಿಗೆ ಸುಳ್ಳಾಗಿ ಸಲ್ಲಿಸಿದ್ದ ದಾಖಲೆಗಳನ್ನು ನಾಶಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನನಗಾಗಲೀ 2 ರಿಂದ 7 ನೇ ಪ್ರತಿವಾದಿಗಳಿಗಾಗಲೀ ಮತ್ತು 8 ರಿಂದ 14 ರವರಿಗಾಗಲೀ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಹನಿಫಾಬಿ ರವರು 2 ರಿಂದ 7 ನೇ ಪ್ರತಿವಾದಿಗಳಿಗೆ ಸಾಕಷ್ಟು ಹಣ ಖರ್ಚು ಮಾಡಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ1(ಎ) ಮತ್ತು 1(ಬಿ) ರವರ ಗಂಡನಾದ ಶೇಖ್ ಅಹಮ್ಮದ್ ಪ್ರತಿವಾದಿ 1(ಇ) ರವರ ಗಂಡನಾದ ಬಷಿರ್ ಅಹಮ್ಮದ್ ರವರಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಲಪಟಾಯಿಸುವ ಹಾಗೂ ವೈಯಕ್ತಿಕ ಕಾರಣಗಳಿಂದ ಪ್ರಸ್ತುತ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

11. ಕುಲುಸಂಬಿ ರವರು ದಿನಾಂಕಃ 08.07.1977 ರಂದು ನಿಡಿ-2 ರಂತೆ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕುಲುಸಂಬಿ ರವರು ದಿನಾಂಕಃ 08.07.1977 ರಂದು ತೀರಿಕೊಂಡಿದ್ದರೂ ಸಹ ನಾನು ದಿನಾಂಕವನ್ನು ತಿದ್ದುಪಡಿ ಮಾಡಿ ಗ್ರಾಮ ಪಂಚಾಯ್ತಿಗೆ ಅರ್ಜಿ ಸಲ್ಲಿಸಿ ಈ ದಾವೆ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಅಕ್ರಮವಾಗಿ ವಿಲ್ ಮಾಡಿಕೊಂಡು ಗ್ರಾಮ ಪಂಚಾಯ್ತಿಗೆ ಅರ್ಜಿ ಕೊಟ್ಟರೂ ಸಹ ನಾವು ಸಲ್ಲಿಸಿರುವ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದು ತಿಳಿದು ಬಂದ ಕಾರಣ ಗ್ರಾಮಪಂಚಾಯ್ತಿಯಿಂದ ಖಾತೆ ಬದಲಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

12. ಕುಲುಸಂಬಿ ತೀರಿಕೊಂಡ ಸಮಯದಿಂದ ನಾನು ದಾವೆ ದಾಖಲು ಮಾಡುವ ಸಮಯದವರೆಗೂ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದ ಕಾರಣ ನಾವು ಅವರ ಜೊತೆ ಹೋಗುತ್ತಿದ್ದ ಕಾರಣ ಪ್ರತಿವಾದಿಗಳು ಆಸ್ತಿಯನ್ನು ಮಾರಾಟ ಮಾಡುತ್ತಿದ್ದ ಸಮಯದಲ್ಲಿ ನಮಗೆ ವಿಚಾರ ಗೊತ್ತಾಗಿ ಕಾನೂನು ಕ್ರಮ ತೆಗೆದುಕೊಂಡಿರುತ್ತೇವೆ ಎಂದು

ಉತ್ತರಿಸಿರುತ್ತಾರೆ. ನಮ್ಮ ತಂದೆ ಹಾಗೂ ನಾವು ಬೇರೆ ಬೇರೆ ಕಡೆ ಇದ್ದ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಅಧಿಕಾರ ಇಲ್ಲದ ಕಾರಣ ನಿಪಿ-9 ರಂತೆ ವಿಲ್ ಅನ್ನು ಸೃಷ್ಟಿ ಮಾಡಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ 1/3 ಭಾಗದಷ್ಟು ಹಕ್ಕು ಇರುತ್ತದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

13. ನಿಪಿ-5 ರಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸಾರ್ವಜನಿಕ ಪ್ರಕಟಣೆಯನ್ನು ಸಹ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ನಿಪಿ-5(ಎ) ರಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಿಸ್ತೀರ್ಣ ಅಥವಾ ಚೆಕ್ಕುಬಂಧಿ ತೋರಿಸಿರುವುದಿಲ್ಲ ಎಂದರೆ ಸರಿ. ದಾವೆ ಸಲ್ಲಿಸುವ ಕಾಲದಲ್ಲೂ ಸಹ ದಾವಾಪತ್ರದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಿಸ್ತೀರ್ಣ ಹಾಗೂ ಚೆಕ್ಕುಬಂಧಿಯನ್ನು ನಮೂದಿಸಿರಲಿಲ್ಲ ಮತ್ತು ನಂತರದಲ್ಲಿ ತಿದ್ದುಪಡಿ ಮಾಡಿ ಸೇರಿಸಿರುತ್ತೇವೆ ಎಂದರೆ ಸರಿ. ದಾವಾಸ್ವತ್ತು ರಾಷ್ಟ್ರೀಯ ಹೆದ್ದಾರಿ 169 ರ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿ. ಪ್ರಸ್ತುತ ರಾಷ್ಟ್ರೀಯ ಹೆದ್ದಾರಿ 169 ನ್ನುಅಗಲೀಕರಣ ಮಾಡುವ ಕಾರಣ ದಾವಾ ಆಸ್ತಿಯಲ್ಲಿ ಅರ್ಧದಷ್ಟು ಭಾಗವನ್ನು ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ಅರ್ಧ ಭಾಗ ತೆಗೆದಿರುವುದಿಲ್ಲ ಸ್ವಲ್ಪ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಪ್ರಸ್ತುತ ವಾಸ ಮಾಡಲು ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸದರಿ ರಾಷ್ಟ್ರೀಯ ಹೆದ್ದಾರಿ 169 ಅಗಲೀಕರಣಕ್ಕೆ ಸಂಬಂಧಿಸಿದಂತೆ ಪರಿಹಾರ ಕೋರಿ ಪ್ರತಿವಾದಿ 1(ಇ) ರವರು ಎನ್ ಹೆಚ್ ಎ ಐ ರವರಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

14. ದಾವಾಸ್ವತ್ತು ಒಟ್ಟು ಕುಟಂಬದ ಸ್ವತ್ತಲ್ಲ, ಆದರೆ ಪ್ರತಿವಾದಿ 1(ಇ) ರವರು ತಾಲ್ಲೂಕು ಕಚೇರಿಯಲ್ಲಿ 94(ಸಿ) ರಂತೆ ಸದರಿ ದಾವಾ ಆಸ್ತಿಯನ್ನು ಮಂಜೂರಾತಿ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರಾಷ್ಟ್ರೀಯ ಹೆದ್ದಾರಿ 169 ನ್ನು ಅಗಲೀಕರಣ ಮಾಡಿದ ನಂತರ ದಾವಾ ಆಸ್ತಿಯಲ್ಲಿ ಪ್ರತಿವಾದಿ 1(ಇ) ಮತ್ತು (ಎಫ್) ರವರು ಹೊಸದಾಗಿ ಮನೆ ನಿರ್ಮಾಣ ಮಾಡಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ ಅದರ ಬಗ್ಗೆ ಗ್ರಾಮ ಪಂಚಾಯಿತಿಗೆ ನಾವು ತಕರಾರನ್ನು ಸಲ್ಲಿಸಿರುತ್ತೇವೆ. ದಾವಾ ಸ್ವತ್ತು ಪ್ರಸ್ತುತ ಅಳತೆ ಮಾಡಿದ ಸಂದರ್ಭದಲ್ಲಿ ಶೃಂಗೇರಿ ಗ್ರಾಮದ ಸರ್ವೆ ನಂ 223 ಸರ್ಕಾರಿ ಜಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನನಗೆ ಸದರಿ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣಪತ್ರ ಸಲ್ಲಿಸಿ

ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ನಿಯೋಜಕರನ್ನು ನೇಮಕ ಮಾಡಲು ಹಾಗೂ ದಾವಾ ಆಸ್ತಿಯನ್ನು ಅಳತೆ ಮಾಡಲು ನನಗೆ ಯಾವುದೇ ತಕರಾರು ಇರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀಸವಾಲು ಃ ಪ್ರತಿವಾದಿ **4** ರಿಂದ **7** ರವರ ಪರ ಶ್ರೀ. ಹೆಚ್ ಆರ್ ಯು ವಕೀಲರಿಂದ ಃ</u>

ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ದಿನಾಂಕಃ 03.06.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾ.ದಂಃ ಶೃಂಗೇರಿ

ಸಾಕ್ಷಿ ಸಹಿಃ